**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರ ನಿಯಮ 330 ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಪ್ರಶ್ನೆ**

ದಿನಾಂಕ:02/02/2000ರ ಸಿಬ್ಬಂದಿ ಮಾದರಿ ರಚನೆಯನ್ವಯ ಚಿತ್ರಕಲೆ, ಸಂಗೀತ, ನಾಟಕ ಹಾಗೂ ಇತರೆ, ವೃತ್ತಿ ಶಿಕ್ಷಕರ ಹುದ್ದೆಗಳನ್ನು ರದ್ದುಪಡಿಸಿದ್ದು, ಈ ಮಾದಿಯನ್ನು ಪುನರ್ ಪರಿಶೀಲಿಸುವಂತೆ ಸರಕಾರದ ಮೇಲೆ ಒತ್ತಡ ಬರುತ್ತಿದ್ದು ವಿನಾಕಾರಣ ವೃತ್ತಿ ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸಲಾಗುತ್ತಿದೆ.

ಚಿತ್ರಕಲೆ, ಸಂಗೀತ, ನಾಟಕ ಹಾಗೂ ಇತರೆ, ವೃತ್ತಿ ಶಿಕ್ಷಣವನ್ನು ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲಿಕಡ್ಡಾಯವಾಗಿ ಜಾರಿಗೊಳಿಸಲು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೂಡ ಹೇಳಲಾಗಿದೆ. ಹೀಗಿದ್ದರೂ ಕೂಡ ವೃತ್ತಿ ಶಿಕ್ಷಣಕ್ಕೆ ಸಿಗಬೇಕಾದ ಪ್ರಾಮುಖ್ಯತೆ ನಮ್ಮ ರಾಜ್ಯದಲ್ಲಿ ಸಿಗುತ್ತಿಲ್ಲ. ವಿದ್ಯಾರ್ಥಿಗಳಲ್ಲಿ ಸೂಪ್ತವಾಗಿರುವ ಪ್ರತಿಭೆ ಹೊರಹೊಮ್ಮಲು ಸಂಗೀತ, ಚಿತ್ರಕಲೆ, ನಾಟಕ ಹಾಗೂ ಇತರೆ ವೃತ್ತಿ ಶಿಕ್ಷಣದ ಅವಶ್ಯಕತೆ ಇದ್ದು, ದಿನಾಂಕ:02/02/2000ರ ಸಿಬ್ಬಂದಿ ಮಾದರಿ ರಚನೆಯನ್ನು ಪುನರ್ ಪರಿಶೀಲಿಸಲು ಒತ್ತಾಯಿಸುತ್ತೇನೆ.

**ಉತ್ತರ**

ಕರ್ನಾಟಕ ಶಿಕ್ಷಣ ಕಾಯ್ದೆ 1983 ನಿಯಮ 1999 ಅನೆಕ್ಸರ್-04 ಸಿಬ್ಬಂದಿ ರಚನಾ ವಿನ್ಯಾಸದಲ್ಲಿ ವೃತ್ತಿ ಶಿಕ್ಷಕರ ಹುದ್ದೆಗಳ ಸೃಜನೆಗೆ ಅವಕಾಶವಿರುವುದಿಲ್ಲ. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಇಡಿ 201 ಎಸ್‌ಇಎಸ್ 2011, ದಿನಾಂಕ:09/06/2016ರಂತೆ, ವೃತ್ತಿ ಶಿಕ್ಷಕರ ಹುದ್ದೆಯು ನಿವೃತ್ತಿ / ಮರಣ, ಇತರೆ ಕಾರಣಗಳಿಂದ ತೆರವಾಗುವ ಹುದ್ದೆಗಳು ರದ್ದುಗೊಳ್ಳುವುದರಿಂದ ದಿನಾಂಕ:02/02/2000 ನಂತರ ವೃತ್ತಿ ಶಿಕ್ಷಕರುಗಳು ನೇಮಕಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಇಪಿ 239 ಎಲ್‌ಬಿಪಿ 2022**

**(ಎಸ್.ಮಧು ಬಂಗಾರಪ್ಪ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಸಚಿವರು.**